**ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ**
**(ಕರ್ನಾಟಕ ಸರ್ಕಾರದ ಉದ್ಯಮ)**
ನೋಂದಾಯಿತ ಕಛೇರಿ : ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಅಡ್ಡ ರಸ್ತೆ, ಹಳೆ ಮದ್ರಾಸ್ ರಸ್ತೆ,
ಇಂದಿರಾನಗರ, ಬೆಂಗಳೂರು-560 038 ದೂರವಾಣಿ: (080) 25196124-29
ಇ-**ಮೇಲ್:** info@kuidfc.com ವೆಬ್ ಸೈಟ್ – www.kuidfc.com

ಕೆಯುಐಡಿಎಫ್‌ಸಿ/ಕೆಯುಡಬ್ಲ್ಯೂಎಸ್‌ಎಮ್‌ಪಿ/1685/2021–22 ದಿನಾಂಕ : 14/12/2021

## 1. ನೇಮಕಾತಿ ಪ್ರಕಟಣೆ

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದಿಂದ ಅನುಷ್ಠಾನಗೊಳ್ಳುತ್ತಿರುವ ಈ ಕೆಳಕಾಣಿಸಿದ ಯೋಜನೆಗಳಿಗೆ ಯೋಜನಾ ಅವಧಿಗೆ ಸೀಮಿತಗೊಳಿಸಿ ಅವಶ್ಯಕವಿರುವ ಹುದ್ದೆಗಳಿಗೆ ಹೆಚ್.ಆರ್. ಪಾಲಿಸಿಯನ್ವಯ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ online ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ವಿಶ್ವ ಬ್ಯಾಂಕ್ ನೆರವಿನಿಂದ ಅನುಷ್ಠಾನ ಗೊಳ್ಳುತ್ತಿರುವ **"ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ"** (KUWSMP) ಯೋಜನೆಯಡಿಯಲ್ಲಿ ಹುಬ್ಬಳ್ಳಿ–ಧಾರವಾಡ, ಬೆಳಗಾವಿ ಹಾಗೂ ಕಲಬುರ್ಗಿ ನಗರಗಳಲ್ಲಿ **24*7** ನಿರಂತರ ನೀರು ಸರಬರಾಜು ಯೋಜನೆಯ ಅನುಷ್ಠಾನಕ್ಕಾಗಿ ಯೋಜನಾ ಮೇಲ್ವಿಚಾರಣಾ ಘಟಕ, ಕೇಂದ್ರ ಕಛೇರಿ ಬೆಂಗಳೂರು ಹಾಗೂ ಯೋಜನಾ ಅನುಷ್ಠಾನ ಘಟಕ ಹುಬ್ಬಳ್ಳಿ, ಬೆಳಗಾವಿ ಹಾಗೂ ಕಲಬುರ್ಗಿ ನಗರಗಳಲ್ಲಿ ಹೈದರಾಬಾದ್–ಕರ್ನಾಟಕ ಭಾಗಕ್ಕೆ ಮೀಸಲಿರಿಸಿದ ತಾಂತ್ರಿಕ & ತಾಂತ್ರಿಕೇತರ ಹುದ್ದೆಗಳು ಸೇರಿ ಒಟ್ಟು **26** ಹುದ್ದೆಗಳು. (ಹೈದರಾಬಾದ್–ಕರ್ನಾಟಕ ಮೀಸಲಾತಿ ನಿಯಮಾವಳಿಗಳನ್ವಯ ಮೀಸಲಿರಿಸಿದ ಹುದ್ದೆಗಳಿಗೆ ಹೈ–ಕ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು)

2. ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನಿಂದ ಅನುಷ್ಠಾನಗೊಳ್ಳುತ್ತಿರುವ **"ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ–ಜಲಸಿರಿ"** (KIUWMIP) ಯೋಜನೆಯಡಿಯಲ್ಲಿ ಯೋಜನಾ ಮೇಲ್ವಿಚಾರಣಾ ಘಟಕ, ಕೇಂದ್ರ ಕಛೇರಿ ಬೆಂಗಳೂರಿನಲ್ಲಿ 1 ತಾಂತ್ರಿಕೇತರ ಹುದ್ದೆ.

3. ಕರ್ನಾಟಕ ಸರ್ಕಾರದ ನೆರವಿನಿಂದ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪಾಲ್ಗೊಳ್ಳುವಿಕೆಯಿಂದ ಅನುಷ್ಠಾನಗೊಳ್ಳುತ್ತಿರುವ **ಒಂಭತ್ತು ಪಟ್ಟಣಗಳ ಯೋಜನೆ (9 Towns Poject)** ಯೋಜನೆಯ ಅನುಷ್ಠಾನಕ್ಕಾಗಿ ಯೋಜನಾ ಮೇಲ್ವಿಚಾರಣಾ ಘಟಕ, ಕೇಂದ್ರ ಕಛೇರಿ ಬೆಂಗಳೂರಿನಲ್ಲಿ 3 ತಾಂತ್ರಿಕ ಹುದ್ದೆಗಳು.

- ಮೇಲ್ಕಂಡ ಹುದ್ದೆಗಳನ್ನು ಗುತ್ತಿಗೆ ಮುಖಾಂತರ ನೇಮಕಾತಿ ಈ ಮೇಲಿನ ಮೂರು ಯೋಜನೆಗೆ ಮಾಡಲಾಗುತ್ತಿದ್ದು, ಖಾಲಿ ಇರುವ ಹುದ್ದೆಗಳು ತಾತ್ಕಾಲಿಕವಾಗಿದ್ದು ಕೇವಲ ಯೋಜನಾ ಅವಧಿಗೆ ಸೀಮಿತವಾದಂತೆ ಮಾತ್ರ ಜಾರಿಯಲ್ಲಿರುತ್ತದೆ. ಹಾಗೂ ಯೋಜನಾ ಕಾಮಗಾರಿಗಳು ಪೂರ್ಣಗೊಂಡ ನಂತರ ಹುದ್ದೆಗಳು ಸ್ವಯಂಚಾಲಿತವಾಗಿ ರದ್ದಾಗುತ್ತವೆ.

- ಅಭ್ಯರ್ಥಿಗಳ ಕಾರ್ಯಕ್ಷಮತೆ ತೃಪ್ತಿಕರವಾಗಿ ಕಂಡುಬಂದಲ್ಲಿ ಸಂಸ್ಥೆಯ ಹಿತದೃಷ್ಟಿಯಿಂದ ಮತ್ತು ಆಡಳಿತಾತ್ಮಕವಾಗಿ ಸಂಸ್ಥೆಯಿಂದ ಅನುಷ್ಠಾನಗೊಳಿಸುತ್ತಿರುವ ಇತರೆ ಯೋಜನೆಗಳಲ್ಲಿ ಅವಶ್ಯಕತೆ ಕಂಡುಬಂದಲ್ಲಿ ಉದ್ಯೋಗಿಗಳನ್ನು ಸಂಸ್ಥೆಯ ಪ್ರಚಲಿತದಲ್ಲಿರುವ ಗುತ್ತಿಗೆ ಆಧಾರದ ನಿಯಮಾವಳಿಗಳನ್ವಯ ಸ್ಥಳಾಂತರಗೊಳಿಸುವ ಅವಕಾಶ ಕಲ್ಪಿಸಲಾಗಿದೆ.
- ಸದರಿ ಹುದ್ದೆಗಳಿಗೆ ನಿಗಮದ ಮಾನವ ಸಂಪನ್ಮೂಲ ನಿಯಮಾವಳಿಗಳ ಅನ್ವಯ ಮೊದಲ 2 ವರ್ಷಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗುತ್ತಿದ್ದು, ವರ್ಷವಾರು ಉದ್ಯೋಗಿಯ ಕಾರ್ಯಕ್ಷಮತೆಯನ್ನಾಧರಿಸಿ ಗುತ್ತಿಗೆ ಅವಧಿಯನ್ನು ಮುಂದುವರೆಸಲಾಗುತ್ತದೆ.
- ವಿಶ್ವಬ್ಯಾಂಕ್ ಪ್ರಾಯೋಜಿತ ಯೋಜನೆಗಳಲ್ಲಿ ತಾಂತ್ರಿಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ವಿಶ್ವಬ್ಯಾಂಕ್ ನಿಯಮಾವಳಿಗಳನ್ವಯ ನಿಗದಿತ ವಿದ್ಯಾರ್ಹತೆ ಹಾಗೂ ಸೇವಾನುಭವ ಹೊಂದಿದ ಮಹಿಳಾ ಉದ್ಯೋಗಿಗಳಿಗೆ ಆದ್ಯತೆ ನೀಡಲಾಗುವುದು. ಮಹಿಳಾ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಪುರುಷ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗುವುದು.
- ಹುದ್ದೆಗಳ ಸಂಖ್ಯೆಗಳು ಬದಲಾವಣೆಗೆ ಒಳಪಟ್ಟಿರುತ್ತದೆ.

ಅರ್ಜಿ ನಮೂನೆಗಳು ನಿಗಮದ ಅಧಿಕೃತ ಅಂತರ್ಜಾಲ **"www.kuidfc.com/Careers"** ನಲ್ಲಿ ದಿನಾಂಕ: 15/12/2021 ರಿಂದ ಲಭ್ಯವಿರುತ್ತದೆ. ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು **online** ಮುಖಾಂತರ ದಿನಾಂಕ 31/12/2021 ರೊಳಗಾಗಿ ಸಲ್ಲಿಸತಕ್ಕದ್ದು, ಖುದ್ದಾಗಿ ಅಥವಾ ಅಂಚೆ/ಕೊರಿಯರ್ ಮೂಲಕ ಸಲ್ಲಿಸಲು ಅವಕಾಶವಿರುವುದಿಲ್ಲ. ಹುದ್ದೆಗಳ ವಿವರ, ವಿದ್ಯಾರ್ಹತೆ, ಅನುಭವ, ವೇತನ/ಭತ್ಯೆ, ಗುತ್ತಿಗೆ ನೇಮಕಾತಿ ಷರತ್ತು ಹಾಗೂ ಇತರೆ ಎಲ್ಲ ಮಾಹಿತಿಗಳನ್ನು ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಅರ್ಜಿಗಳೊಂದಿಗೆ ವಿದ್ಯಾರ್ಹತೆ, ಅನುಭವ ಹಾಗೂ ಇತರೆ ಸಂಬಂಧಪಟ್ಟ ದಾಖಲೆಗಳನ್ನು ಅರ್ಜಿಗಳೊಂದಿಗೆ upload ಮಾಡದಿದ್ದಲ್ಲಿ ಅಪೂರ್ಣ ಅರ್ಜಿಗಳನ್ನು ಹಾಗೂ ನಿಗದಿತ ದಿನಾಂಕದ ನಂತರ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ನೇಮಕಾತಿ ವಿಷಯದಲ್ಲಿ ಸಂಸ್ಥೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

## 2. ಹುದ್ದೆಗಳ ವಿವರ :

### 1) ಕುಸ್ಸೆಂಪ್ (KUWSMP) ಯೋಜನೆ

**ಹೈದರಾಬಾದ್ – ಕರ್ನಾಟಕ ಅಭ್ಯರ್ಥಿಗಳಿಗೆ ಮೀಸಲಿರಿಸಲಾದ ಹುದ್ದೆಗಳು**

| ಕ್ರ ಸಂ | ಹುದ್ದೆ POSTS | ಕರ್ತವ್ಯ ಸ್ಥಳ | | ಒಟ್ಟು |
|---|---|---|---|---|
| | | ಯೋಜನಾ ಮೇಲ್ವಿಚಾರಣಾ ಘಟಕ ಕುಸ್ಸೆಂಪ್ ಕೇಂದ್ರ ಕಚೇರಿ ಬೆಂಗಳೂರು | ಯೋಜನಾ ಅನುಷ್ಠಾನ ಘಟಕ ಕುಸ್ಸೆಂಪ್ ಕಲಬುರ್ಗಿ | |
| 1 | ಕಾರ್ಯನಿರ್ವಾಹಕ ಅಭಿಯಂತರರು Executive Engineer | 01 | 01 | 2 |
| 2 | ಸಹಾಯಕ ಅಭಿಯಂತರರು (ಪರಿಸರ) Assistant Engineer (Environment) | – | 01 | 1 |
| 3 | ಲೆಕ್ಕಪತ್ರ ಅಧೀಕ್ಷಕರು Account Supdt. | – | 01 | 1 |
| 4 | ಲೆಕ್ಕ ಸಹಾಯಕರು Accounts Assistant | – | 01 | 1 |
| 5 | ಡಿ.ಇ.ಓ. / ಕಂಪ್ಯೂಟರ್ ಆಪರೇಟರ್ Computer Operator | – | 02 | 2 |
| | ಒಟ್ಟು | 1 | 6 | 7 |

**ಮೇಲ್ಕಾಣಿಸಿದ ಹುದ್ದೆಗಳಿಗೆ ಕರ್ನಾಟಕ ಸರ್ಕಾರದ ನಿಯಮಾವಳಿಗಳನ್ವಯ ಹೈದ್ರಾಬಾದ್–ಕರ್ನಾಟಕ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.**

**ಹೈದರಾಬಾದ್ – ಕರ್ನಾಟಕ ಮೀಸಲಾತಿ ಹೊರತುಪಡಿಸಿ ಇತರ ಕಛೇರಿಗಳಲ್ಲಿ ಇರುವ ಹುದ್ದೆಗಳ ವಿವರ :**

| ಕ್ರ ಸಂ | ಹುದ್ದೆ POSTS | ಕರ್ತವ್ಯ ಸ್ಥಳ | | | | ಒಟ್ಟು |
|---|---|---|---|---|---|---|
| | | ಯೋಜನಾ ಮೇಲ್ವಿಚಾರಣಾ ಘಟಕ ಕೇಂದ್ರ ಕುಸ್ಸೆಂಪ್ ಕಛೇರಿ ಬೆಂಗಳೂರು | ಯೋಜನಾ ಅನುಷ್ಠಾನ ಘಟಕ ಕುಸ್ಸೆಂಪ್ ಹುಬ್ಬಳ್ಳಿ | ಯೋಜನಾ ಅನುಷ್ಠಾನ ಘಟಕ ಕುಸ್ಸೆಂಪ್ ಬೆಳಗಾವಿ | ಯೋಜನಾ ಅನುಷ್ಠಾನ ಘಟಕ ಕುಸ್ಸೆಂಪ್ ಕಲಬುರಗಿ | |
| 1 | ಅಧೀಕ್ಷಕರ ಅಭಿಯಂತರರು Superintendent Engineer | 01 | – | – | – | 1 |
| 2 | ಸಹಾಯಕ ಪ್ರಧಾನ ವ್ಯವಸ್ಥಾಪಕರು (ಕಾಂಟ್ರ್ಯಾಕ್ಟ್ ಮ್ಯಾನೇಜಮೆಂಟ್) Assistant General Manager (Contract Management) | 01 | – | – | – | 1 |
| 3 | ಕಾರ್ಯನಿರ್ವಾಹಕ ಅಭಿಯಂತರರು Executive Engineer | – | 01 | 01 | – | 2 |
| 4 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು Assistant Executive Engineer | – | 02 | 02 | – | 4 |
| 5 | ಸಹಾಯಕ ಅಭಿಯಂತರರು (ಪರಿಸರ) Assistant Engineer (Environment) | – | 01 | 01 | – | 2 |
| 6 | ವ್ಯವಸ್ಥಾಪಕರು Manager | – | – | – | 01 | 1 |
| 8 | ಸಾರ್ವಜನಿಕ ಸಂಪರ್ಕ ಅಧಿಕಾರಿ Public Relation Officer | – | 01 | – | – | 1 |
| 7 | ಲೆಕ್ಕಪತ್ರ ಅಧೀಕ್ಷಕರು Account Supdt. | – | – | 01 | – | 1 |
| 9 | ಲೆಕ್ಕ ಸಹಾಯಕರು Accounts Assistant | – | – | 02 | – | 2 |
| 10 | ಡಿ.ಇ.ಓ. / ಕಂಪ್ಯೂಟರ್ ಆಪರೇಟರ್ DEO/ Computer Operator | – | 02 | 02 | – | 4 |
| | **ಒಟ್ಟು** | **2** | **7** | **9** | **1** | **19** |

2) "**ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ–ಜಲಸಿರಿ**" **(KIUWMIP) ಯೋಜನೆ**

| ಕ್ರ ಸಂ | ಹುದ್ದೆ POSTS | ಕರ್ತವ್ಯ ಸ್ಥಳ |
|---|---|---|
| | | ಯೋಜನಾ ಮೇಲ್ವಿಚಾರಣಾ ಘಟಕ ಕೇಂದ್ರ ಕಛೇರಿ ಬೆಂಗಳೂರು |
| 1 | ಲೆಕ್ಕಿಗ / ಹಿರಿಯ ಕಾರ್ಯನಿರ್ವಾಹಕ ಸಹಾಯಕರು (ಹಣಕಾಸು) / Accountant / Sr. Executive Assistant (Finance) | 01 |

**3) ಒಂಭತ್ತು ಪಟ್ಟಣಗಳ ಯೋಜನೆ (9 Towns Poject) ಯೋಜನೆ**

| ಕ್ರ ಸಂ | ಹುದ್ದೆ POSTS | ಕರ್ತವ್ಯ ಸ್ಥಳ |
|---|---|---|
| | | ಯೋಜನಾ ಮೇಲ್ವಿಚಾರಣಾ ಘಟಕ ಕೇಂದ್ರ ಕಛೇರಿ ಬೆಂಗಳೂರು |
| 1 | ಕಾರ್ಯನಿರ್ವಾಹಕ ಅಭಿಯಂತರರು Executive Engineer | 01 |
| 2 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು Assistant Executive Engineer | 01 |
| 3 | ಸಹಾಯಕ ಅಭಿಯಂತರರು (ನೀರು ಸರಬರಾಜು/ಸಿವಿಲ್) Assistant Engineer (Water Supply/ Civil) | 01 |

3. **ವೇತನ ಮತ್ತು ಭತ್ಯೆಗಳು / Pay and Allowances:-**

ನಿಗಮದ ಮಾನವ ಸಂಪನ್ಮೂಲ ನಿಯಮಾವಳಿಗಳ ಅನ್ವಯ ಹುದ್ದೆಗಳಿಗೆ ನಿಗದಿಪಡಿಸಲಾಗಿರುವ ದರ್ಜೆಗೆ ಅನ್ವಯವಾಗುವ ವೇತನ ಮತ್ತು ಭತ್ಯೆಗಳಿಗೆ ಅರ್ಹರಾಗಿರುತ್ತಾರೆ.

| ಕ್ರಸ | ಹುದ್ದೆ | ಹುದ್ದೆಗೆ ಅನ್ವಯವಾಗುವ ದರ್ಜೆ | ಸಂಚಿತ ವೇತನ ** |
|---|---|---|---|
| 1 | ಅಧೀಕ್ಷಕರ ಅಭಿಯಂತರರು Superintending Engineer | ಪ್ರಧಾನ ವ್ಯವಸ್ಥಾಪಕರು– GM | 1,08,852 |
| 2 | ಕಾರ್ಯನಿರ್ವಾಹಕ ಅಭಿಯಂತರರು Executive Engineer | ಉಪ ಪ್ರಧಾನ ವ್ಯವಸ್ಥಾಪಕರು DGM | 83,244 |
| 3 | ಸಹಾಯಕ ಪ್ರಧಾನ ವ್ಯವಸ್ಥಾಪಕರು Assistant General Manager | ಸಹಾಯಕ ಪ್ರಧಾನ ವ್ಯವಸ್ಥಾಪಕರು– A GM | 77,206 |
| 4 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು Assistant Executive Engineer | ಸಹಾಯಕ ಪ್ರಧಾನ ವ್ಯವಸ್ಥಾಪಕರು– A G M | 77,206 |
| 5 | ಸಾರ್ವಜನಿಕ ಸಂಪರ್ಕ ಅಧಿಕಾರಿ Public Relation Officer | ವ್ಯವಸ್ಥಾಪಕರು Manager | 66,512 |
| 7 | ಸಹಾಯಕ ಅಭಿಯಂತರರು Assistant Engineer | ಉಪ ವ್ಯವಸ್ಥಾಪಕರು Deputy Manager | 63,311 |
| 8 | ಲೆಕ್ಕಪತ್ರ ಅಧೀಕ್ಷಕರು Account Supdt. | ಸಹಾಯಕ ವ್ಯವಸ್ಥಾಪಕರು Assistant Manager | 60,110 |
| 9 | ಲೆಕ್ಕಿಗ/ Accountant | ಹಿರಿಯ ಕಾರ್ಯನಿರ್ವಾಹಕ ಸಹಾಯಕರು Senior Executive Assistant | 55,645 |
| 10 | ಲೆಕ್ಕ ಸಹಾಯಕರು Accounts Assistant | ಕಾರ್ಯನಿರ್ವಾಹಕ ಸಹಾಯಕರು/ Executive Assistant | 40,731 |
| 11 | ಡಿ.ಇ.ಓ. / ಕಂಪ್ಯೂಟರ್ ಆಪರೇಟರ್ Computer Operator | ಕಿರಿಯ ಕಾರ್ಯನಿರ್ವಾಹಕ ಸಹಾಯಕರು/ Junior Executive Assistant | 31,637 |

** ನಿಗದಿಪಡಿಸಲಾಗಿರುವ ಮೂಲ ವೇತನದೊಂದಿಗೆ ಎಚ್.ಆರ್. ಪಾಲಿಸಿ ನಿಯಮಗಳ ಪ್ರಕಾರ ಅನ್ವಯವಾಗುವ ಭತ್ಯೆಗಳನ್ನು ಸೇರಿಸಿ ಕ್ರೋಡೀಕೃತ ವೇತನ ಹಾಗೂ ಇತರೆ ಭತ್ಯೆಗಳನ್ನು ಪಾವತಿಸಲಾಗುವುದು. ಮೇಲ್ಕಾಣಿಸಿದ ವೇತನವು ಬೆಂಗಳೂರು ನಗರಕ್ಕೆ ಅನ್ವಯಿಸುವ ಮನೆ ಬಾಡಿಗೆ ಭತ್ಯೆಯ ದರದ ಪ್ರಕಾರ ಇದ್ದು, ಆಯಾ ನಗರಗಳಿಗೆ ರಾಜ್ಯ ಸರ್ಕಾರದ ನಿಯಮಾವಳಿಗಳನ್ವಯ ಅನ್ವಯವಾಗುವ ಮನೆ ಬಾಡಿಗೆ ಭತ್ಯೆಯ ಅನ್ವಯ ವೇತನ ನಿಗದಿಪಡಿಸಲಾಗುವುದು..

** ಪಿಂಚಣಿ ಪಡೆಯುತ್ತಿರುವ ನಿವೃತ್ತ ಸರ್ಕಾರಿ ನೌಕರರಿಗೆ ಕೆ.ಸಿ.ಎಸ್.ಆರ್. ನಿಯಮ 313 (ಬಿ) ಪ್ರಕಾರ ವೇತನ ನಿಗದಿಪಡಿಸಲಾಗುವುದು. ಮತ್ತು ಸದರಿಯವರು ಆಯ್ಕೆಯಾದಲ್ಲಿ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಕಛೇರಿಯಿಂದ ಅವರ ಮೇಲೆ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲ ಎಂಬ ಬಗ್ಗೆ ಹಾಗೂ ಬೇ ಬಾಕಿ ಪ್ರಮಾಣಗಳನ್ನು ಹಾಜರುಪಡಿಸಿದಲ್ಲಿ ಮಾತ್ರ ನೇಮಕಾತಿಗೆ ಪರಿಗಣಿಸಲಾಗುವುದು.

4. **ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು :**

| ಪ್ರಾರಂಭಿಕ ದಿನಾಂಕ | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ |
|---|---|
| 15/12/2021 | 31/12/2021 |

5. **ಅರ್ಜಿಗಳನ್ನು ಸಲ್ಲಿಸುವ ವಿಧಾನ :-**

ಅರ್ಜಿಗಳನ್ನು online ಮೂಲಕವೇ ಭರ್ತಿ ಮಾಡಿ, ಭಾವಚಿತ್ರ ಸಹಿಯೊಂದಿಗೆ, ವಯೋಮಿತಿ, ವಿದ್ಯಾರ್ಹತೆ, ಅನುಭವ, ಮೀಸಲಾತಿ, ಕನ್ನಡ ಭಾಷಾ ಜ್ಞಾನ ಇತ್ಯಾಧಿಗಳಿಗೆ ಸಂಬಂಧಿಸಿದ ಎಲ್ಲಾ ಸ್ಪಷ್ಟ ದಾಖಲೆಗಳನ್ನು ಅಪ್ಲೋಡ್ ಮಾಡಬೇಕು. ಅಪೂರ್ಣ/ ಅಸ್ಪಷ್ಟ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ನಿಗದಿತ ಸಮಯದಲ್ಲಿ online ನಲ್ಲಿ ಅರ್ಜಿ ಸಲ್ಲಿಸಲು ವಿಫಲವಾದಲ್ಲಿ ನಿಗಮವು ಹೊಣೆಗಾರವಾಗುವುದಿಲ್ಲ. ಅರ್ಜಿಗಳನ್ನು ಅಂಚೆ/ಕೊರಿಯರ್ ಮೂಲಕ ಅಥವಾ ನೇರವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅರ್ಜಿಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದು ಹಾಗೂ ಯಾವುದೇ ಹಂತದಲ್ಲಿಯಾಗಲಿ ನ್ಯೂನತೆಗಳು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಶೈಕ್ಷಣಿಕ ವಿದ್ಯಾರ್ಹತೆ/ ಅನುಭವ / ಕರ್ತವ್ಯಗಳ ವಿವರ "www.kuidfc.com/Careers" ದಲ್ಲಿ ಲಭ್ಯವಿರುತ್ತದೆ.

6. **ಅರ್ಜಿ ಸಲ್ಲಿಸಲು ವಿಶೇಷ ಸೂಚನೆ :-**

- ಒಬ್ಬ ಅಭ್ಯರ್ಥಿಯು ಒಂದು ಹುದ್ದೆಗೆ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸತಕ್ಕದ್ದು.
- ನೇಮಕಾತಿಗೆ ಸಂಬಂಧಿಸಿದಂತೆ ನಿಗಮದ ಅಂತರ್ಜಾಲ www.kuidfc.com/Careers" ದಲ್ಲಿ ಲಭ್ಯವಿರುವ ಸೂಚನೆಗಳಂತೆ ಅರ್ಜಿಗಳನ್ನು ಸಲ್ಲಿಸುವುದು.
- ಅರ್ಜಿಗಳಲ್ಲಿ ಅಧಿಕೃತ ಇ-ಮೇಲ್ ವಿಳಾಸ/ಮೊಬೈಲ್ ಸಂಖ್ಯೆ ಹಾಗೂ ವಿಳಾಸವನ್ನು ತಪ್ಪದೇ ನಮೂದಿಸುವುದು. ಯಾವುದೇ ತಪ್ಪು ಮಾಹಿತಿಯನ್ನು ನೀಡದೇ ಆನ್ ಲೈನ್‌ನಲ್ಲಿ ನೀಡಲಾಗಿರುವ ಅರ್ಜಿ ನಮೂನೆಯಲ್ಲಿ ಮಾತ್ರ ವಿವರಗಳನ್ನು ಭರ್ತಿ ಮಾಡತಕ್ಕದ್ದು.
- ಒಂದು ವೇಳೆ ತಪ್ಪು ಮಾಹಿತಿ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ, ಅಂತಹವರ ವಿರುದ್ಧ ನಿಗಮವು ಕಾನೂನಿನನ್ವಯ ನೇಮಕಾತಿಯ ಯಾವ ಹಂತದಲ್ಲಿಯಾದರೂ ಸೂಕ್ತ ಕ್ರಮಕೈಗೊಳ್ಳುವುದು ಹಾಗೂ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಅಭ್ಯಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ಕಡ್ಡಾಯವಾಗಿ ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ. ಯಾವುದೇ ಕಾರಣಕ್ಕೂ ಈ ಸಂಸ್ಥೆಯಿಂದ ನಕಲು ಪ್ರತಿ ಪಡೆಯಲು ಅವಕಾಶ ಇರುವುದಿಲ್ಲ.

7. ಪದವಿ/ ಸ್ನಾತಕೋತ್ತರ/ ಇಂಜಿನಿಯರಿಂಗ್ ಇತ್ಯಾದಿ ವಿಧ್ಯಾಭ್ಯಾಸಗಳಿಗೆ ಸಂಬಂಧಿಸಿದ ಅಂಕಪಟ್ಟಿ/ ಪದವಿ ಪತ್ರಗಳ ನೈಜತೆಯ ಪರಿಶೀಲನೆಗಾಗಿ ಸಂಬಂಧಿಸಿದ ವಿಶ್ವವಿಧ್ಯಾನಿಲಯಗಳಿಗೆ ಕಳುಹಿಸಲಾಗುವುದು ಹಾಗೂ ಪರಿಶೀಲನಾ ವೆಚ್ಚವನ್ನು ಆಯ್ಕೆಯಾದ ಅಭ್ಯರ್ಥಿಗಳು ಭರಿಸತಕ್ಕದ್ದು.

8. **ಅರ್ಹತಾ ಷರತ್ತುಗಳು :-**

- ಭಾರತೀಯ ನಾಗರೀಕನಾಗಿರತಕ್ಕದ್ದು.
- ಕನ್ನಡ ಭಾಷಾಜ್ಞಾನ, ಕನ್ನಡದಲ್ಲಿ ಮಾತನಾಡುವುದು, ಬರೆಯುವುದು, ಓದುವುದು ಅತ್ಯವಶ್ಯಕ.
- ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟುಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.
- ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ನಿಗಮವು ಕಾಯ್ದಿರಿಸಿಕೊಂಡಿದೆ.
- ಕೇಂದ್ರ ಅಥವಾ ಕರ್ನಾಟಕ ಅಥವಾ ಇತರೆ ರಾಜ್ಯದ ಲೋಕಸೇವಾ ಆಯೋಗದಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ಖಾಯಂ ಆಗಿ ಡಿಬಾರ್ ಆದ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.
- **ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಅನುಬಂಧ-ಎ ಯಲ್ಲಿರುವ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ ಉಪವಿಭಾಗದ ಸಹಾಯಕ ಆಯುಕ್ತರಿಂದ ಪಡೆದಿಟ್ಟುಕೊಳ್ಳತಕ್ಕದ್ದು. ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಸದರಿ ಮೀಸಲಾತಿಯಡಿ**

ಪರಿಗಣಿಸಲಾಗುವುದಿಲ್ಲ. ನಿಗದಿಪಡಿಸಿದ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ತಿರಸ್ಕರಿಸಲಾಗುವುದು. ಈ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಕಡ್ಡಾಯವಾಗಿ ಪಡೆದಿಟ್ಟುಕೊಂಡು ಅರ್ಜಿಯೊಂದಿಗೆ ಅಪ್ಲೋಡ್ ಮಾಡಬೇಕು, ತಪ್ಪಿದ್ದಲ್ಲಿ ಅವರ ಮೀಸಲಾತಿ/ಅಭ್ಯರ್ಥಿತ್ವನ್ನು ಪರಿಗಣಿಸಲಾಗುವುದಿಲ್ಲ.

09. ನೇಮಕಾತಿ ವಿಧಾನ :–

- ವಿದ್ಯಾರ್ಹತೆ, ಮೆರಿಟ್, ಅನುಭವದ ಆಧಾರದ ಮೇಲೆ ಮೌಖಿಕ ಸಂದರ್ಶನ ನಡೆಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

10. **ಪ್ರಮುಖ ಸೂಚನೆಗಳು :–**

- ಹುದ್ದೆಗಳ ವರ್ಗೀಕರಣದನ್ವಯ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹಾಗೂ ನೇಮಕಾತಿ ಅಧಿಸೂಚನೆಯನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಹಾಗೂ ಹೊಸ ಅಧಿಸೂಚನೆಯನ್ನು ಪ್ರಕಟಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
- ಸದರಿ ಹುದ್ದೆಗಳಿಗೆ ನಿಗಮದ ಮಾನವ ಸಂಪನ್ಮೂಲ ನಿಯಮಾವಳಿಗಳ ಅನ್ವಯ ನೇಮಕ ಮಾಡಲಾಗುತ್ತಿದ್ದು, ಮೊದಲ 2 ವರ್ಷ ಗುತ್ತಿಗೆ ಅವಧಿಯಾಗಿದ್ದು, ವರ್ಷವಾರು ಕಾರ್ಯಕ್ಷಮತೆಯನ್ನಾಧರಿಸಿ ಗುತ್ತಿಗೆ ಅವಧಿಯನ್ನು ಮುಂದುವರೆಸಲು ಅವಕಾಶವಿರುತ್ತದೆ.
- ನೇಮಕಾತಿ ಪ್ರಕ್ರಿಯೆ ಬಗ್ಗೆ ಅಭ್ಯರ್ಥಿಗಳಿಂದ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
- ಈಗಾಗಲೇ ಕೆ.ಯು.ಐ.ಡಿ.ಎಫ್.ಸಿ. ನಿಗಮದ ಇತರೆ ಯೋಜನೆಗಳಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ನೇಮಕಾತಿಗೆ ಅರ್ಜಿ ಸಲ್ಲಿಸಿ, ನೇಮಕಗೊಂಡಲ್ಲಿ ಸದರಿ ನೇಮಕಾತಿಗಳನ್ನು ಹೊಸ ನೇಮಕಾತಿ ಎಂದು ಪರಿಗಣಿಸಲಾಗುವುದು.
- ಅಭ್ಯರ್ಥಿಗಳು ಸಾರ್ವಜನಿಕ ಉದ್ಯೋಗ ನಿಯಮಗಳಲ್ಲಿ ಉಲ್ಲೇಖಿಸಿದ ಎಲ್ಲ ಸಂಬಂಧಪಟ್ಟ ಪ್ರಮಾಣ ಪತ್ರಗಳನ್ನು ಹಾಜರುಪಡಿಸತಕ್ಕದ್ದು.
- ಸಂದರ್ಶನದ ಸಮಯದಲ್ಲಿ ಅರ್ಜಿಯೊಂದಿಗೆ ಸಲ್ಲಿಸಿದ ಎಲ್ಲ ಪ್ರಮಾಣ ಪತ್ರಗಳ ಮೂಲಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ.

11. **ದುರ್ನಡತೆ :–**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡು ಬಂದಲ್ಲಿ ಅಂತಹ ಅಭ್ಯಥಿಗಳನ್ನು ಹುದ್ದೆಯ ಸಂದರ್ಶನ/ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಅರ್ಜಿಗಳೊಂದಿಗೆ ವಿದ್ಯಾರ್ಹತೆ, ಅನುಭವ ಹಾಗೂ ಇತರೆ ಸಂಬಂಧಪಟ್ಟ ದಾಖಲೆಗಳನ್ನು ಅರ್ಜಿಗಳೊಂದಿಗೆ upload ಮಾಡದಿದ್ದಲ್ಲಿ ಅಪೂರ್ಣ ಹಾಗೂ ನಿಗದಿತ ದಿನಾಂಕದ ನಂತರ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ನೇಮಕಾತಿ ವಿಷಯದಲ್ಲಿ ಸಂಸ್ಥೆಯ ತಿರ್ಮಾನವೇ ಅಂತಿಮವಾಗಿರುತ್ತದೆ.

**(ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ)**

**ಪ್ರಧಾನ ವ್ಯವಸ್ಥಾಪಕರು (ಆಡಳಿತ)**
**ಕೆಯುಐಡಿಎಫ್‌ಸಿ, ಬೆಂಗಳೂರು**

14/12/2021

14/12/2021